## ಎಂವಿಸಿ ಸಂಖ್ಯೆಃ 56/2023 ಆರ್ ಡಬ್ಲೂಃ1

## ದಿನಾಂಕಃ 19-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

## ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ಅಧಿಕಾರ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತು.
2. ವಿಮಾ ಪಾಲಸಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಆರ್ -2 ಎಂದು ಗುರುತಿಸಲಾಯಿತು.

## ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ

ಸದರಿ ದ್ವಿಚಕ್ರ ವಾಹನ ಅದರ ಸಂಖ್ಯೆಃ ಕೆ ಎ 26/ ಇಸಿ 9527 ನೇದ್ದರ ವಾಹನಕ್ಕೆ ನಮ್ಮ ಸಂಸ್ಥೆವತಿಯಿಂದ ವಿಮೆ ಚಾಲ್ತಿಯಲ್ಲಿ ಇತ್ತು. ಅದು ಅಪಘಾತ ಸಮಯದಲ್ಲಿ ಕೂಡಾ ಚಾಲ್ತಿಯಲ್ಲಿ ಇತ್ತು. ಸದರಿ ವಾಹನದ ಮಾಲೀಕನ ಹೆಸರು ಮೌಲಾ ಸಾಹೇಬ ಸುಂಕದ ಅಂದರೆ ನಿಜ. ಆತನೆ ಸವಾರನಾಗಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದರೆ ನಿಜ. 2 ವಾಹನಗಳ ಮದ್ಯ ಅಪಘಾತ ಸಂಭವಿಸಿದೆ ಎಂದರೆ ನಿಜ. ಮತ್ತೊಂದು ದ್ವಿಚಕ್ರದ ವಾಹನದ ಸಂಖ್ಯೆ ಕೆ ಎ 25/ ಇಎಂ 0890 ಅಂತಾ ಇತ್ತು ಎಂದರೆ ನಿಜ. ನಾವು ಮಾಲೀಕ ಕಂ ಚಾಲಕ ಕುರಿತಂತೆ 330 ರೂಪಾಯಿ 1 ವರ್ಷದವರೆಗೆ ಹಣ ಪಡೆದಿರುತ್ತೇವೆ. ಅದನ್ನು ಕೇವಲ 1 ವರ್ಷ ಅಂತಾ ನಮ್ಮ ಸಂಸ್ಥೆಯವರು ಖಾಯ್ದೆ ಪ್ರಕಾರ ತೋರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದು 5 ವರ್ಷಗಳ ಬಂಡಲ ಪಾಲಸಿ ಎಂದು ಹೇಳುತ್ತಾರೆ.

ಅದು ಪ್ಯಾಕೇಜ್ ಪಾಲಸಿ ಅಂದರೆ ಕೇವಲ 1 ವರ್ಷದವರೆಗೆ ಮಾತ್ರ ಹೇಳುತ್ತಾರೆ. ಪಾಲಸಿಯ ಮೇಲೆ 5 ವರ್ಷಗಳವರೆಗೆ ಪ್ಯಾಕೇಜ್ ಪಾಲಸಿ ಅಂತಾ ತೋರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ 5 ವರ್ಷಗಳವರೆಗೆ ಪ್ಯಾಕೇಜ್ ಪಾಲಸಿ ಇದ್ದರು ಸಹ ಪರಿಹಾರ ಕೊಡುವ ಜಾವಾಬದಾರಿಯಿಂದ ನುಣಚಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸವಾರನಿಗೆ ಚಾಲನಾ ಪ್ರಮಾಣ ಪತ್ರ ಇತ್ತು ಎಂದರೆ ಸರಿಯಲ್ಲ. ಇದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂ ವಿ ಸಿ 183/2021 ನೆದ್ದರ ಲಕ್ಷ್ಮೇಶ್ವರ ಹಿರಿಯ ನ್ಯಾಯಾಲಯದಲ್ಲಿ ನಾವು ಈಗಾಗಲೆ ಹಣ ತುಂಬಿರುತ್ತೇವೆ ಎಂದರೆ ನಿಜ. ಕಾರಣ ಅದು ಹಿಂಬದಿ ಸವಾರಿನಿಗೆ ಸಂಬಂಧಿಸಿದ್ದು ಇತ್ತು ಎಂದು ಹೇಳುತ್ತಾರೆ. ಅದೇ ರೀತಿ ಈ ಅರ್ಜಿಯಲ್ಲಿ ಅರ್ಜಿದಾರನಿಗೆ ಪರಿಹಾರ ಕೊಡಲು ನಾವೇ ಬಾದ್ಯಸ್ಥರು ಅಂದರೆ ಸರಿಯಲ್ಲ. ಸದರಿ ಆ ಪ್ರಕರಣದಲ್ಲಿ ಸವಾರನಿಗೆ ಪರಿಹಾರ ಕೊಟ್ಟಿದ್ದು ನನಗೆ ಆ ಪ್ರಕರಣದ ಬಗ್ಗೆ ಮಾಹಿತಿ ಇರದ ಇದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಅರ್ಜಿಯು ಕಲಂ 163 ಎ ವಾಹನ ಕಾಯ್ದೆ ಅಡಿಯಲ್ಲಿ ದಾಖಲಿಸಲಾಗಿದೆ ಎಂದರೆ ನಿಜ. ಸದರಿ ಪರಿಹಾರ ಕೊಡಲು ನಾವೇ ಜವಾಬ್ದಾರರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ